ರೀಜನಲ್ ಟ್ರಾನ್ಸ್‌ಪೋರ್ಟ್ ಅಥಾರಿಟಿಯವರೇ ಕೊಡತಕ್ಕಂಥದ್ದು. ಸಮಯವನ್ನು ನಿಗಧಿಪಡಿಸುವುದು ರೀಜನಲ್ ಟ್ರಾನ್ಸ್‌ಪೋರ್ಟ್ ಆಫೀಸರ್. ಇಲ್ಲೇನಾಗಿದೆಯೆಂದರೆ ಕೇಂದ್ರ ಸರ್ಕಾರ ಮೋಟರ್ ವೆಹಿಕಲ್ ಆಕ್ಟ್‌ಗೆ ಒಂದು ತಿದ್ದುಪಡಿಯನ್ನು ಮಾಡಿತು. ಹಾಗೆ ತಿದ್ದುಪಡಿಯನ್ನು ಮಾಡಿಯಾದ ಮೇಲೆ ಲಿಬರಲೈಸೇಷನ್ ಪ್ರಕಾರ ಕೇಳಿದವರಿಗೆಲ್ಲಾ ಬಸನ್ನು ಕೊಡಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ನಮ್ಮ ಗಮನಕ್ಕೆ ಬಂದಿದೆ. ದುರಾದೃಷ್ಟವಶಾತ್ ಆ ತಿದ್ದುಪಡಿಗೆ ರಾಜ್ಯ ಸರ್ಕಾರ ಯಾವುದೇ ತಿದ್ದುಪಡಿಯನ್ನು ತರುವುದಕ್ಕಾಗುವುದಿಲ್ಲ. ಆ ರೀತಿ ಅವಕಾಶವಿದ್ದರೆ ನಾವೇ ತಿದ್ದುಪಡಿಯನ್ನು ತರುತ್ತಿದ್ದೆವು. ಆದರೆ ಒಂದು ಬಸ್ ಮತ್ತು ಇನ್ನೊಂದು ಬಸ್ ಹೊರಡುವುದಕ್ಕೆ ಕನಿಷ್ಟ 30 ನಿಮಿಷಗಳ ಅಂತರವಿರಬೇಕಾಗುತ್ತದೆ. ಆದರೆ ಸಮಯದ ಅಂತರ ಈಗ ಒಂದು ನಿಮಿಷ ಅಥವಾ ಎರಡು ನಿಮಿಷದಲ್ಲಿಯೇ ಮತ್ತೊಂದು ಬಸ್ ಹೋಗುತ್ತಿರುವುದರಿಂದ ಇಂಥ ಪರಿಸ್ಥಿತಿ ನಿರ್ಮಾಣವಾಗಿದೆ. ಏಕೆಂದರೆ 40 ಬಸ್‌ಗಳು 232 ಟ್ರಿಪ್‌ಗಳನ್ನು ಮಾಡುತ್ತಿವೆ. ಇದರ ಬಗ್ಗೆ ನಾವು ಈಗಾಗಲೇ ಅಧಿಕಾರಿಗಳಿಗೆ ಸೂಚನೆಯನ್ನು ಕೊಟ್ಟಿದ್ದೇವೆ. ಟ್ರಾನ್ಸ್‌ಪೋರ್ಟ್ ಅಧಿಕಾರಿಗಳಿಗೆ ಸೂಚನೆಯನ್ನು ಕೊಟ್ಟು ಸಮಯದ ಅಂತರವನ್ನು ಹೆಚ್ಚು ಮಾಡುವುದಕ್ಕೆ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಬಸ್‌ಗಳನ್ನು ನಿಲ್ಲಿಸುವುದಕ್ಕೆ ನಾವು ಕ್ರಮವನ್ನು ತೆಗೆದುಕೊಳ್ಳುತ್ತೇವೆ.

## ಲಾಲ್‌ಬಾಗಿನಲ್ಲಿ ಗಲೀಜು ಮಾಡುವವರಿಗೆ ದಂಡ.

178 - ಶ್ರೀ ರಾಮಲಿಂಗಾರೆಡ್ಡಿ (ಜಯನಗರ) : ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ಕಬ್ಬನ್ ಉದ್ಯಾನವನದಲ್ಲಿ ಗಲೀಜು ಮಾಡುವವರಿಗೆ ದಂಡ ವಿಧಿಸುತ್ತಾರೆ. ಇರುವುದು ಸರ್ಕಾರದ ಗಮನಕ್ಕೆ ಬಂದಿರುವುದೆ?*

*ಆ) ಅದೇ ರೀತಿ ಲಾಲ್‌ಬಾಗ್‌ನಲ್ಲಿ ಗಿಡಗಳನ್ನು ಹಾಳು ಮಾಡುವವರಿಗೆ ಹಾಗೂ ಗಲೀಜು ಮಾಡುವವರಿಗೆ ದಂಡ ವಿಧಿಸಲಾಗುತ್ತಿದೆಯೇ?*

ಶ್ರೀ ಡಿ. ಟಿ. ಜಯಕುಮಾರ್ (ತೋಟಗಾರಿಕೆ ರಾಜ್ಯ ಸಚಿವರು) :

ಅ) ಉಚ್ಚ ನ್ಯಾಯಾಲಯದ ಆದೇಶದ ಮೇರೆಗೆ ಪೊಲೀಸ್ ಕಮೀಷನರ್ ಹೊರಡಿಸಿರುವ ದಿನಾಂಕ 2-6-97 ಪ್ರಕಟಣೆಯನ್ವಯ ಕಬ್ಬನ್ ಉದ್ಯಾನವನದಲ್ಲಿ ಯಾವುದೇ ರೀತಿ ಗಲೀಜು ಮಾಡುವುದು, ಮರದ ರಂಬೆಗಳನ್ನು ಮುರಿಯುವುದು. ಆಟಗಳನ್ನು ಆಡುವುದು ವಾಹನಗಳನ್ನು ಅನಧಿಕೃತವಾದ ಸ್ಥಳಗಳಲ್ಲಿ ನಿಲ್ಲಿಸುವುದನ್ನು ನಿಷೇಧಿಸಲಾಗಿದೆ. ಈ ಪ್ರಕಟಣೆಯನ್ವಯ ತಪ್ಪಿತಸ್ಥರಿಗೆ ದಂಡ ವಿಧಿಸಲು ಅವಕಾಶವಿರುತ್ತದೆ.

ಆ) ಇಲ್ಲ.

ಶ್ರೀ ಎಸ್. ಸುರೇಶ್ ಕುಮಾರ್ (ರಾಜಾಜಿನಗರ) : ಮಾನ್ಯ ಉಪಾಧ್ಯಕ್ಷರೇ, ಈ ಉತ್ತರವನ್ನು ನೋಡಿದಾಗ ನನಗೇನನ್ನಿಸಿತು ಎಂದರೆ ಈ ಸರ್ಕಾರಕ್ಕೆ ತನ್ನದೇ ಆದ ಆತ್ಮ, ಹೃದಯ ಮತ್ತು ಬುದ್ಧಿ ಇಲ್ಲವೆಂದು. ಏಕೆಂದರೆ ನಾನು ಮೊದಲನೆಯ ಪ್ರಶ್ನೆಯಲ್ಲಿ ಕಬ್ಬನ್ ಉದ್ಯಾನವನದಲ್ಲಿ ಗಲೀಜು ಮಾಡುವವರಿಗೆ ದಂಡ ವಿಧಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿರುವುದಕ್ಕೆ ಉತ್ತರದಲ್ಲಿ ಏನು ಹೇಳಿದ್ದಾರೆಂದರೆ, "ಉಚ್ಚ ನ್ಯಾಯಾಲಯದ ಆದೇಶದ ಮೇರೆಗೆ ಪೊಲೀಸ್ ಕಮೀಷನರ್ ಹೊರಡಿಸಿರುವ ದಿನಾಂಕ 2.6.97ರ ಪ್ರಕಟಣೆಯನ್ವಯ ಕಬ್ಬನ್ ಉದ್ಯಾನವನದಲ್ಲಿ ಯಾವುದೇ ರೀತಿ ಗಲೀಜು ಮಾಡುವುದು, ಮರದ ರೆಂಬೆಗಳನ್ನು ಮುರಿಯುವುದು, ನಿಷೇಧಿಸಲಾಗಿದೆ. ಈ ಪ್ರಕಟಣೆಯನ್ವಯ ತಪ್ಪಿತಸ್ಥರಿಗೆ ದಂಡ ವಿಧಿಸಲು ಅವಕಾಶ ಇರುತ್ತದೆ. ಇನ್ನು ಎರಡನೆಯ ಪ್ರಶ್ನೆ ಅದೇ ರೀತಿ ಲಾಲ್‌ಬಾಗ್‌ನಲ್ಲಿ ಗಿಡಗಳನ್ನು ಹಾಳು ಮಾಡುವವರಿಗೆ ಹಾಗೂ ಗಲೀಜು ಮಾಡುವವರಿಗೆ ದಂಡ ವಿಧಿಸಲಾಗುತ್ತಿದೆಯೇ ಎಂದು ಕೇಳಿದರೆ ಇಲ್ಲ ಎಂದು ಹೇಳಿದ್ದಾರೆ. ಹಾಗಾದರೆ ಲಾಲ್‌ಬಾಗ್‌ಗೋಸ್ಕರ ಮತ್ತೆ ಒಂದು ಸಲ ಹೈಕೋರ್ಟ್‌ಗೆ ಹೋಗಬೇಕಾ? ಕಬ್ಬನ್‌ಪಾರ್ಕ್‌ನಲ್ಲಿ ಗಲೀಜು ಮಾಡಬಾರದು, ಲಾಲ್‌ಬಾಗ್‌ನಲ್ಲಿ ಮಾಡಬಹುದು. ಕಬ್ಬನ್ ಪಾರ್ಕ್ ಹಾಳು ಮಾಡಬಾರದು, ಲಾಲ್ ಬಾಗ್ ಮಾಡಬಹುದು. ಇದಕ್ಕೆ ಸರ್ಕಾರ ಏನು ನಿಲುವು ತೆಗೆದುಕೊಳ್ಳುತ್ತದೆ?

ಶ್ರೀ ಡಿ. ಟಿ. ಜಯಕುಮಾರ್ : ಮಾನ್ಯ ಉಪಾಧ್ಯಕ್ಷರೇ, ದಿನಾಂಕ 1.6.96 ಮತ್ತು ದಿನಾಂಕ 17.4.97ರಂದು ಕಬ್ಬನ್ ಉದ್ಯಾನವನ ಸಂರಕ್ಷಣೆ ವಿಷಯವಾಗಿ ಉಚ್ಚನ್ಯಾಯಾಲಯದಿಂದ ಆದೇಶ ಬಂದಿದೆ. ಮತ್ತೆ ಅದನ್ನು ಏಕೆ ಮಾಡಲಿಲ್ಲವೆಂದು ಕಂಟೆಫ್ಟ್ ಆಫ್ ಕೋರ್ಟ್ ಕೂಡ ಮಾಡುವುದಕ್ಕೆ ಆದೇಶ ಬಂದಿದ್ದರಿಂದ ಕಬ್ಬನ್ ಪಾರ್ಕ್ ಬಗ್ಗೆ ಸಾಕಷ್ಟು ಕೂಡ ಚರ್ಚೆಯಾಗಿದೆ. ಕಳೆದ ಬಾರಿ ಕೂಡ ವಿಧಾನಸಭೆಯಲ್ಲಿ ಚರ್ಚೆಯಾಗಿತ್ತು. ಸಂರಕ್ಷಣೆ ಮಾಡುವ ಮೂಲ ಉದ್ದೇಶ ಏನೆಂದರೆ ಅಲ್ಲಿ ಫುಟ್ ಬಾಲ್, ಕ್ರಿಕೆಟ್ ಆಟಗಳನ್ನು ಆಡುತ್ತಾರೆ. ಒಂದು ಗಾದೆ ಹೇಳುತ್ತಾರಲ್ಲಾ, 'ಕುಂಬಾರನಿಗೆ ಒಂದು ವರ್ಷ ದೊಣ್ಣೆಗೆ ಒಂದು ನಿಮಿಷ' ಎಂದು ಅಲ್ಲಿ ನಾವು ಸಭೆ ಸಮಾರಂಭಗಳನ್ನು ಮಾಡುವುದು. ಲಾರಿ, ಸ್ಕೂಟರ್‌ಗಳನ್ನು ತೆಗೆದುಕೊಂಡು ಹೋಗುವುದು. ಈ ರೀತಿ ಮಾಡುತ್ತಿರುವುದರಿಂದ ಅಲ್ಲಿ ಸಭೆ ಸಮಾರಂಭಗಳನ್ನು ಮಾಡಬಾರದೆಂದು ನಾವು ಪ್ರಯತ್ನ ಪಟ್ಟೆವು. ಅದೂ ಆಗಲಿಲ್ಲ. ಯಾರೋ ಪಬ್ಲಿಕ್ ಲಿಟಿಗೇಷನ್ ಹೋಗಿ ಉಚ್ಚ ನ್ಯಾಯಾಲಯದ ಒಂದು ಆದೇಶ 1996 ಮತ್ತು 1997ರಲ್ಲಿ ತಂದಿದ್ದಾರೆ. ಅದರ ಅನ್ವಯ ನಮ್ಮ ಪೊಲೀಸ್ ಕಮಿಷನರ್ ಒಂದು ಆದೇಶ ಹೊರಡಿಸಿದ್ದಾರೆ. ಇಂತಹ ಚಟುವಟಿಕೆ ನಡೆಯಕೂಡದು, ಅದರ ಸಂರಕ್ಷಣೆ ಮಾಡಬೇಕೆಂದು ಒಂದು ಗುಡ್ ಇಂಟೆನ್‌ಷನ್ ಇಟ್ಟುಕೊಂಡು ಮಾಡಿದ್ದೇವೆಯೇ ಹೊರತು ಇನ್ನು ಬೇರೆ ಯಾವುದೇ ಉದ್ದೇಶದಿಂದ ಅಲ್ಲ. ಅದೇ ರೀತಿ ಲಾಲ್‌ಬಾಗ್‌ನಲ್ಲಿ ಕೂಡ ಮಾಡಬೇಕೆಂದು ಹೇಳಿ ಈಗಾಗಾಲೇ ಪೋಲೀಸ್ ಕಮಿಷನರ್‌ಗೆ ಪತ್ರವನ್ನು ಬರೆದಿದ್ದೇವೆ. ಅದಕ್ಕೂ ಕೂಡ ಈ ಕಾನೂನು ಅನ್ವಯವಾಗುತ್ತದೆ.

ಶ್ರೀ ಎಸ್. ಸುರೇಶ್ ಕುಮಾರ್ : ಸರ್ಕಾರ ಮಾಡಬೇಕಾದ ಕೆಲಸಕ್ಕೆ ನಾಗರೀಕರು ಹೈಕೋರ್ಟ್‌ಗೆ ಹೋಗಬೇಕಾ? ಲಾಲ್‌ಬಾಗ್‌ನಲ್ಲಿ ಕೂಡ ಹೈಕೋರ್ಟ್ ಜಡ್ಜಸ್ ವಾಕಿಂಗ್ ಮಾಡಬೇಕು. ಅವರು ವಾಕಿಂಗ್ ಮಾಡಿಬಿಟ್ಟು ಪಬ್ಲಿಕ್ ಇಂಟರೆಸ್ಟ್ ಲಿಟಿಗೇಷನ್ ಬಂದರೆ ಕಾನೂನು

ಪಾಸ್ ಮಾಡಬೇಕಾ? ಸರ್ಕಾರ it should act, it should not react. ನೀವು ರಿಯಾಕ್ಟ್ ಮಾಡುತ್ತಿದ್ದೀರಿ ಅಷ್ಟೇ. ಲಾಲ್‌ಬಾಗ್, ಕಬ್ಬನ್‌ಪಾರ್ಕನ್ನು ನಾವು ಇನ್ನೊಂದು ಮಾಡುವುದಕ್ಕೆ ಆಗುವುದಿಲ್ಲ. ಇರುವುದನ್ನೇ ಉಳಿಸಿಕೊಳ್ಳಬೇಕು. ಇಲ್ಲಿ ಪ್ರಶ್ನೆ ಲಾಲ್‌ಬಾಗ್‌ನಲ್ಲಿ ಗಿಡಗಳನ್ನು ಹಾಳು ಮಾಡುವವರಿಗೆ ದಂಡ ವಿಧಿಸಲಾಗುತ್ತಿದೆಯೇ ಎಂದು ಕೇಳಿದರೆ ಇಲ್ಲ ಎಂದು ಹೇಳಿದ್ದಾರೆ. ಎಂದರೆ ಗಲೀಜು ಮಾಡಬಹುದು, ಗಿಡಗಳನ್ನು ಕಟ್ ಮಾಡಬಹುದು.

ಶ್ರೀಮತಿ ಬಿ. ಟಿ. ಲಲಿತಾ ನಾಯಕ್ : ಮಾನ್ಯ ಉಪಾಧ್ಯಕ್ಷರೇ, ಕಬ್ಬನ್ ಪಾರ್ಕ್‌ನಲ್ಲಿ ಬಾಲಭವನ ಇದೆ. ಅಲ್ಲಿ ಕೋರ್ಟ್‌ನ ಆದೇಶ ಏನು ಕೊಟ್ಟಿದ್ದಾರೆ ಎಂದರೆ ಮಕ್ಕಳು ಆಡುವುದರಿಂದ ಬಹಳ ಗಲೀಜಾಗುತ್ತಿದೆ, ಅಲ್ಲಿ ಏನೂ ಮಾಡಬಾರದು, ಎಲ್ಲವನ್ನು ತೆಗೆದುಹಾಕಬೇಕೆಂದು ತಿಳಿಸಿದ್ದಾರೆ. ಈಗ ಬೆಂಗಳೂರಿನಲ್ಲಿ ಇರುವುದೇ ಅದೊಂದೇ. ಅದನ್ನೇ ಆದಷ್ಟು ಚೊಕ್ಕಟವಾಗಿ ಇಟ್ಟುಕೊಂಡು ನಾವು ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಅದರಲ್ಲಿ ಜನಗಳ ಸಹಕಾರ ಇಲ್ಲ. ಎಲ್ಲಾದಕ್ಕೂ ಕೋರ್ಟಿನ ಆದೇಶ ಬಂದರೆ ಮಾತ್ರ ಸ್ವಚ್ಛವಾಗಿರಬೇಕು, ಇಲ್ಲ ಎಂದರೆ ಇಲ್ಲ ಎನ್ನುವಂತಹ ಮನೋಭಾವನೆ ಬಂದಿದೆ. ಅಲ್ಲಿ ಲಾರಿ, ಬಸ್ಸುಗಳು ಹಾಗೂ ಕಾರು ಒಡಾಡಬಾರದು ಎಂದು ತಿಳಿಸಿದ್ದಾರೆ. ಆದರೆ ನಾವು ಮಕ್ಕಳನ್ನು ದೂರ ಕರೆದುಕೊಂಡು ಹೋಗಬೇಕಾಗುತ್ತದೆ. ಸ್ಲಂ ಮಕ್ಕಳನ್ನು ಕರೆದುಕೊಂಡು ಅಲ್ಲಿ ಪಶ್ಚೇತರ ಚಟುವಟಿಕೆಗಳಿಗೆ ಹೋದರೆ, ಅದಕ್ಕೂ ಬೇಡ ಎಂದು ಹೇಳುತ್ತಾರೆ. ಅಲ್ಲಿ ಹೋಗಬಾರದು ಎಂದರೆ ಮಕ್ಕಳು ಏಕೆ ಬರುತ್ತಾರೆ? ಅದಕ್ಕೆ ಹೇಳುತ್ತಿದ್ದೇನೆ, ತಾವು ಏನು ರೂಲ್ಸ್ ಮಾಡುತ್ತೀರಿ, ಅದು ಚಟುವಟಿಕೆ ಇಲ್ಲದ ಹಾಗೆ ಇರುತ್ತದೆ. ಆದುದರಿಂದ ಅವರು ಕೇಳಿರುವ ಪ್ರಶ್ನೆಗೆ ಹೇಳುತ್ತಿದ್ದೇನೆ, ಸಾರ್ವಜನಿಕರ ಸಹಕಾರ ಇಲ್ಲದೆ ಇದ್ದರೆ ಕೋರ್ಟ್‌ಗಳು ಕೆಟ್ಟದಾಗಿ ಆದೇಶ ಕೊಟ್ಟುಬಿಡುತ್ತವೆ. ನಾವು ಅದನ್ನು ಪಾಲಿಸುವುದಕ್ಕೆ ಹೋದರೆ ಏನು ಮಾಡುವುದಕ್ಕೂ ಆಗುವುದಿಲ್ಲ. ಬೆಂಗಳೂರು ಮಕ್ಕಳು ಎಲ್ಲಿಗೆ ಹೋಗಬೇಕು? ಆದುದರಿಂದ ಜನಗಳು ಸಹಕರಿಸಬೇಕು.

ಶ್ರೀ ಡಿ. ಟಿ. ಜಯಕುಮಾರ್ : ಮಾನ್ಯ ಉಪಾಧ್ಯಕ್ಷರೇ, ಮಕ್ಕಳು ಬರಬಾರದು, ಪ್ರವಾಸಿಗಳು ಬರಬಾರದು ಎನ್ನುವ ಉದ್ದೇಶ ಇಲ್ಲ. ಎಲ್ಲರೂ ಬರಬೇಕು, ನೋಡಬೇಕು ಸಂತೋಷ ಪಡಬೇಕು ಎನ್ನುವುದು ಸರ್ಕಾರದ ಉದ್ದೇಶ. ಆದರೆ ಅದನ್ನು ಮಾಡುವಾಗ ರೀತಿ ನೀತಿಗಳು ಬೇಕು. ಏಕಂದರೆ ಗಿಡಗಳನ್ನು ಕೀಳುವುದು, ಹುಲ್ಲಿನ ಮೇಲೆ ಕ್ರಿಕೆಟ್, ಫುಟ್‌ಬಾಲ್ ಆಡುವುದು ಮಾಡುತ್ತಾರೆ. ಮಾನ್ಯ ಸುರೇಶ್ ಕುಮಾರ್‌ರವರಿಗೆ ಗೊತ್ತಿರಬಹುದು. ಜನತಾ ದಳ, ರೈತ ಸಂಘ, ಕಾರ್ಮಿಕ ಸಂಘಗಳು, ಯಾನಿಯನ್ ಎಲ್ಲಾ ಕೂಡ ಲಾಲ್‌ಬಾಗೆ ಹೆಚ್ಚಿನ ಸಮಾರಂಭಗಳನ್ನು ನಡೆಸುತ್ತಿದ್ದವು. ಅದಕ್ಕೆ ಸರ್ಕಾರ ಆದೇಶ ಮಾಡಿ ಮಾಡಿ ಅದನ್ನು ಯಾರೂ ಕೂಡ ಗಣನೆಗೆ ತೆಗೆದುಕೊಳ್ಳಲಿಲ್ಲ. ನಾವೇ ಕಾಂಗ್ರೆಸ್ಸ್‌ನವರೇ ಮಾಡಲಿಲ್ಲ. ಇದರ ಬಗ್ಗೆ ಎಲ್ಲ ಒತ್ತಡ ಉಚ್ಛನ್ಯಾಯಾಲಯಕ್ಕೆ ಹೋಯಿತು. ಆಗ ಅವರು ಯಾವುದೇ ಸಭೆ ಸಮಾರಂಭ ನಡೆಸಕೂಡದು ಎಂದು ಹೇಳಿದರು. ಕಬ್ಬನ್ ಪಾರ್ಕ್ ಹಾಳಾಗುತ್ತದೆ, ಆದರಿಂದ ರಕ್ಷಣೆ ಮಾಡಬೇಕೆಂದು ಗುಡ್ ಇಂಟನ್‌ಷನ್‌ನಿಂದ ಮಾಡಿದ್ದೇವೆಯೇ ಹೊರತು ನೀವು ಯಾರೂ ಹೋಗಬೇಡಿ, ಹೋದವರಿಗೆ ಫೈನ್ ಹಾಕುತ್ತೇವೆ ಎನ್ನುವ ಉದ್ದೇಶ ಅಲ್ಲ.

ಶ್ರೀ ಎಸ್. ಸುರೇಶ್ ಕುಮಾರ್ : ನನ್ನ ಪ್ರಶ್ನೆ ಅದಲ್ಲ.

ಶ್ರೀ ಡಿ. ಟಿ. ಜಯಕುಮಾರ್ : ಪೋಲೀಸ್ ಕಮಿಷನರ್‌ಗೆ ಲಾಲ್‌ಬಾಗ್‌ಗೂ ಕೂಡ ಎಕ್ಸ್‌ಟೆಂಡ್ ಮಾಡಬೇಕೆಂದು ಬರೆದಿದ್ದೇವೆ.

ಶ್ರೀ ಎಂ. ಸಿ. ನಾಣಯ್ಯ : ನಮ್ಮಲ್ಲಿ ಒಂದು ಕಾನೂನು ಇದೆ. ಇದೇ ಸದನದಲ್ಲಿ ಮೊನ್ನೆ ಪಬ್ಲಿಕ್ ಪ್ರೆಮಿಸಸ್ ಪಾರ್ಕ್‌ನಲ್ಲಿ ಹೇಸಿಗೆ ಮಾಡುವವರಿಗೆ ಈಗ 200 ರೂಪಾಯಿಯವರೆಗೆ ದಂಡ ಇದೆ. ಅದನ್ನು 500 ರೂಪಾಯಿಯವರೆಗೆ ಏರಿಸಬೇಕೆಂದು ಇದೇ ಸದನದಲ್ಲಿ ಅಂಗೀಕಾರ ಕೊಟ್ಟಿದೆ. ಆದುದರಿಂದ ಕಬ್ಬನ್ ಪಾರ್ಕ್ ಆಗಲಿ, ಲಾಲ್‌ಬಾಗ್ ಆಗಲಿ, ಪಬ್ಲಿಕ್ ಪ್ಲೇಸ್‌ನಲ್ಲಿ ಹೇಸಿಗೆ ಮಾಡುವುದು ಮಾಡಿದರೆ ಅವರಿಗೆ ದಂಡ ವಿಧಿಸುವುದಕ್ಕೆ ಅವಕಾಶ ಇದೆ. ಅದು ಲಾಲ್‌ಬಾಗ್‌ಗೂ ಅಪ್ಲೈ ಆಗುತ್ತದೆ, ಕಬ್ಬನ್ ಪಾರ್ಕ್‌ಗೂ ಅಪ್ಲೈ ಆಗುತ್ತದೆ.

ಶ್ರೀ ಎಸ್. ಸುರೇಶ್ ಕುಮಾರ್ : ಈಗ ನೀವು ನನಗೆ ಉತ್ತರ ಕೊಟ್ಟಿದ್ದೋ ಜಯಕುಮಾರ್‌ನವರಿಗೆ ಉತ್ತರ ಕೊಟ್ಟಿದ್ದೋ ?

ಶ್ರೀ ಡಿ. ಟಿ. ಜಯಕುಮಾರ್ : ಮೊದಲು ಕೋರ್ಟಿನಲ್ಲಿ ಹೋದಾಗ ಕಬ್ಬನ್ ಪಾರ್ಕ್‌ಗೆ ಅಷ್ಟಕ್ಕೆ ಸೀಮಿತವಾಗಿ ಹೋಗಿದ್ದು, ಈಗ ಅದಕ್ಕೆ ಒಂದು ಸೂಚನೆ ಕೊಟ್ಟಿದ್ದಾರೆ. ಅದೇ ಪ್ರಕಾರ ಲಾಲ್‌ಬಾಗ್‌ಗೂ ಕೂಡ ಮಾಡುತ್ತೇವೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಮಂತ್ರಿಗಳು ಪ್ರಶ್ನೆಯನ್ನೇ ಅರ್ಥ ಮಾಡಿಕೊಂಡಿಲ್ಲ. ನಾವು ಅವರ ಬಗ್ಗೆ ಮಾತನಾಡಿದರೆ ತೀಕ್ಷ್ಣವಾಗಿ ಮಾತನಾಡುತ್ತೇವೆಂದು ತಿಳಿಮಕೊಳ್ಳಬಾರದು. ನೀವು ಪ್ರಶ್ನೆಯನ್ನೇ ಅರ್ಥ ಮಾಡಿಕೊಂಡಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು) : ಮಾನ್ಯ ವಾಟಾಳ್ ನಾಗರಾಜ್ ಅವರ ಜಿಲ್ಲೆಗೆ ಅನೇಕ ಜನ ಏಕೆ ಹೋಗುವುದಿಲ್ಲವೆಂದರೆ ಅಲ್ಲಿಗೆ ಹೋದವರೆಲ್ಲಾ ಅಧಿಕಾರ ಕಳೆದುಕೊಳ್ಳುತ್ತಾರೆ ಎನ್ನುವ ಭಯದಿಂದ ಹೆಚ್ಚು ಜನ ಹೋಗುತ್ತಿಲ್ಲ. ಅವರ ಜೊತೆ ಕರೆದುಕೊಂಡು ಹೋಗುತ್ತಾರೆ. ಇಲ್ಲಿಗೆ ಬಂದ ತಕ್ಷಣ ಮುಳುಗಿ ಹೋಗುತ್ತಾರೆ.

ಉಪಾಧ್ಯಕ್ಷರು : ಚಾಮರಾಜನಗರದಲ್ಲಿ ಒಂದು ಕಬ್ಬನ್ ಪಾರ್ಕ್ ಮಾಡಬೇಕಾಗಿದೆಯೇ ?

ಶ್ರೀ ವಾಟಾಳ್ ನಾಗರಾಜ್ : ಕಬ್ಬನ್ ಪಾರ್ಕ್ ಚಾಮರಾಜನಗರದಲ್ಲಿ ಮಾಡಬೇಕಾಗಿಲ್ಲ. ಯಾರೇ ಮುಖ್ಯಮಂತ್ರಿಗಳು ಬರಲಿ, ಉಪಮುಖ್ಯಮಂತ್ರಿಗಳಂತೂ ಬಂದೇ ಬರುತ್ತಾರೆ. ಅದರ ಬಗ್ಗೆ ಚಿಂತೆ ಇಲ್ಲ. ಅವರು ಮುಂದೆ ಬರುತ್ತಾರೋ ಇಲ್ಲವೋ ಅನುಮಾನ ಇದೆ. ನಾನು ತಮಗೆ ಏನು ಹೇಳುತ್ತೇನೆಂದರೆ ಇಲ್ಲಿ ಒಂದು ಶಾಸನವಾಯಿತು. ಆಗ ತಾವೇ ಇದ್ದಿರಿ ತಮ್ಮ ಅಧ್ಯಕ್ಷತೆಯಲ್ಲೇ ಆಯಿತು. ಪಾರ್ಕ್‌ಗಳಲ್ಲಿ ಮಾತ್ರ ವಿಸರ್ಜನೆ ಮಾಡುವವರಿಗೆ 200 ರಿಂದ 500ರವರಗೆ ದಂಡವನ್ನು ಜಾಸ್ತಿ ಮಾಡಬೇಕೆಂದು ಒಂದು ನಿರ್ಧಾರವಾಯಿತು. ನಾನು ಅದಕ್ಕೆ ವಿರೋಧ.

ಶ್ರೀ ಎಂ. ಸಿ. ನಾಣಯ್ಯ : ಮೂತ್ರ ವಿಸರ್ಜನೆ ಮಾತ್ರವಲ್ಲ. ಅದು ತಪ್ಪೇ, ಮೂತ್ರ ವಿಸರ್ಜನೆ ಮಾಡಿದರೂ ತಪ್ಪೇ; ಸಾರ್ವಜನಿಕ ಸ್ಥಳಗಳಲ್ಲಿ ಪಾರ್ಕಗಳಲ್ಲಿ, ಕರ್ನಾಟಕ ರಾಜ್ಯದಲ್ಲಿ ಯಾವ ಭಾಗದಲ್ಲಿ ಮಾಡಿದರೂ ಕೂಡ ಹೇಳುತ್ತಿದ್ದೇನೆ.....

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಇಂಗ್ಲೀಷ್‌ನಲ್ಲಿ ಅವರು ನ್ಯೂಸನ್ಸ್ ಎಂದು ಹೇಳಿಕೊಳ್ಳಲ್ಲಿ, ಹೇಸಿಗೆ ಎಂದು ಹೇಳಿಕೊಳ್ಳಲಿ. ಆದರೆ ಇದರಲ್ಲಿ ಮೂತ್ರ ವಿಸರ್ಜನೆ ಬರುತ್ತದೆ ತಾನೇ? ಆದುದರಿಂದ ಈ ಮೂತ್ರ ವಿಸರ್ಜನೆಯನ್ನು ಮಾಡಿದವರಿಗೆ 200ರಿಂದ 500 ದಂಡ ಎಂದು ಹೇಳಿದ್ದೀರಿ. ಅದಕ್ಕೆ ನಾನು ವಿರೋಧ ಮಾಡಿದ್ದೇನೆ. ನಾನು ಏನು ಹೇಳುತ್ತೇನೆಂದರೆ ಮಾನ್ಯ ಮುಖ್ಯಮಂತ್ರಿಗಳು ಸಿಕ್ಕಿದರು, ತಾವು ಸದನದಲ್ಲಿ ಇರಬೇಕಾಗಿತ್ತು, ಈ ರೀತಿ ಕರಾಳ ಶಾಸನವನ್ನು ರಚನೆ ಮಾಡುವಾಗ ಇರಬೇಕಾಗಿತ್ತು, ಈ ತರಹ ಮಾಡಿದ್ದು ಸರಿ ಇಲ್ಲ ಎಂದು ಹೇಳಿದೆ. ಆಗ ಅವರು ಹೇಳಿದರು, ಅದನ್ನು ಆಮೇಲೆ ಹೇಳುತ್ತೇನೆ. ಬೆಳಿಗ್ಗೆ ಬಹಳ ಜನ ವ್ಯಾಯಾಮ ಮಾಡುವವರು, ಗಾಳಿ ಸೇವನೆ ಮಾಡುವವರು, ತಿರುಗಾಡತಕ್ಕಂಥವರು ಆರೋಗ್ಯಕ್ಕೆಂದು 3-4 ಲೀಟರ್ ನೀರು ಕುಡಿಯುವವರು ಇದ್ದಾರೆ. ಇದು ಸತ್ಯ. ಸಕ್ಕರೆ ಖಾಯಿಲೆ ಇರುವವರಿಗೆ ಅರ್ಧ ಗಂಟೆಗೆ ಒಂದೊಂದು ಸಾರಿ ಮೂತ್ರ ವಿಸರ್ಜನೆಯಾಗುತ್ತಿರುತ್ತದೆ. ನಮ್ಮ ಶಾಸಕರನ್ನೇ ಇಟ್ಟುಕೊಳ್ಳೋಣ. ಶಾಸಕರುಗಳು ಅಲ್ಲಿ ಅನೇಕ ಸಾರಿ ಓಡಾಡುವುದು ನೋಡಿದ್ದೇನೆ. ನಾನು ಓಡಾಡುತ್ತೇನೆ. ಬಹಳ ಜನ ಓಡಾಡುತ್ತಾರೆ. ನೀರು ಕುಡಿಯುತ್ತಾರೆ, ನನಗೆ ಅನ್ನಿಸುವುದು, ಒಂದು ಸಾರಿ ಮೂತ್ರ ವಿಸರ್ಜನೆ ಮಾಡಿದರೆ 200 ರಿಂದ 500ರವರೆಗೆ ದಂಡ ವಿಧಿಸಿದರೆ, ನಾಲ್ಕು ಬಾರಿ ಮಾಡಿದರೆ 1,200 ರೂಪಾಯಿ ಆಯಿತಲ್ಲಾ, ಒಂದು ತಿಂಗಳಿಗೆ 42 ಸಾವಿರ ರೂಪಾಯಿ ಆಗುತ್ತದೆ. ಇಷ್ಟು ದುಡ್ಡು ಕೊಡುವವರು ಯಾರು?

ಶ್ರೀ ಸಿದ್ದರಾಮಯ್ಯ : ವಾಟಾಳ್ ನಾಗರಾಜ್‌ರವರು ಕಾನೂನು ಇದ್ದರೂ ಕೂಡ ನೀವು ನಾಲ್ಕು ಬಾರಿ ಮಾತ್ರ ವಿಸರ್ಜನೆ ಮಾಡುತ್ತಿದ್ದೀರಿ ಎಂದಾಗುತ್ತದೆ.

ಉಪಾಧ್ಯಕ್ಷರು : ಈಗಾಗಲೇ ಕಾನೂನು ಜಾರಿಯಾಗಿದೆ. ಅದರ ಬಗ್ಗೆ ಈಗ ಚರ್ಚೆ ಮಾಡುವುದು ಬೇಡ.

10.30 ಎ.ಎಂ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಉಪಾಧ್ಯಕ್ಷರೆ, ನಾನು ಚರ್ಚೆಗೆ ಹೋಗುವುದಿಲ್ಲ, ಇದಕ್ಕೆ ಒಂದು ಪರ್ಯಾಯ ವ್ಯವಸ್ಥೆ ಏನು ಎಂದು ನಾನು ಮಾನ್ಯ ಮುಖ್ಯ ಮಂತ್ರಿಗಳನ್ನು ಕೇಳಿದಾಗ ಅವರು ಏನು ಹೇಳಿದರೆಂದರೆ ಮುರಾರ್ಜಿ ದೇಸಾಯಿಯವರ ಸೂತ್ರವನ್ನು ಅನುಸರಿಸುವುದು ಒಳ್ಳೆಯದೆಂದು ಹೇಳಿದರು. ಅದು ಸೂಕ್ತವೇನೋ ಎಂದು ಅನಿಸುತ್ತಿದೆ.

ಶ್ರೀ ಎಸ್. ಸುರೇಶ್ ಕುಮಾರ್ : ಮಾನ್ಯ ಉಪಾಧ್ಯಕ್ಷರೆ, ಕಾನೂನು ಮತ್ತು ಸಂಸದೀಯ ವ್ಯವಹಾರ ಸಚಿವರಾದ ಶ್ರೀ ಎಂ.ಸಿ. ನಾಣಯ್ಯನವರು ಒಂದು ಮಾತನ್ನು ಹೇಳಿದರು. ಈ

ವಿಚಾರವಾಗಿ ಸದನದಲ್ಲಿ ಬಿಲ್ ಪಾಸ್ ಮಾಡಿದ್ದೇವೆಂದು ಹೇಳಿದರು. ಅದು ನನಗೆ ಗೊತ್ತಿರುವ ಹಾಗೆ ಅದನ್ನು ಕಬ್ಬನ್ ಪಾರ್ಕ್‌ಗೆ ಮಾತ್ರ ಮಾಡಿರುವಂಥಾದ್ದು; ತಾವು ಬೇಕಾದರೆ ಅದನ್ನು ತರಿಸಿ ನೋಡಿ.

ಶ್ರೀ ವಾಟಾಳ್ ನಾಗರಾಜ್ : ಅದರಲ್ಲಿ ಲಾಲ್‌ಬಾಗ್ ಇಲ್ಲ, ಕಬ್ಬನ್ ಪಾರ್ಕ್ ಎಂದು ಇದೆ.

ಶ್ರೀ ಎಸ್. ಸುರೇಶ್ ಕುಮಾರ್ : ಮಾನ್ಯ ವಾಟಾಳ್ ನಾಗರಾಜ್‌ರವರು ಕೇಳಿದಂತಹ ಪ್ರಶ್ನೆಗೆ ನಿಮ್ಮಿಂದ ಮಂಥ್ಲಿ ಪಾಸ್ ಏನಾದರೂ ಕೊಡುತ್ತೀರಾ?

ಶ್ರೀ ಎಂ. ಸಿ. ನಾಣಯ್ಯ : ಮಂಥ್ಲೀ ಪಾಸ್ ಯಾರಿಗೆ?

ಶ್ರೀ ಎಸ್. ಸುರೇಶ್ ಕುಮಾರ್ : ಮಾನ್ಯ ವಾಟಾಳ್ ನಾಗರಾಜ್‌ರವರು ದಿನವೂ 3-4 ಲೀಟರ್ ನೀರು ಕುಡಿಯುತ್ತೇವೆಂದು ಹೇಳಿದರು.

ಶ್ರೀ ಎಂ. ಸಿ. ನಾಣಯ್ಯ : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ವಾಟಾಳ್ ನಾಗರಾಜ್‌ರವರು ಒಂದು ಪ್ರಶ್ನೆಯನ್ನು ಕೇಳಿದರು, ನಿಜ, ಮನುಷ್ಯರಿಗೆ ಕೆಲವು ದೈಹಿಕವಾಗಿ ಡಯಾಬಿಟಿಸ್ ಬರುತ್ತದೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಉಪಾಧ್ಯಕ್ಷರೆ, ನನಗೆ ಅಂತಹ ಅನಾರೋಗ್ಯ ಯಾವುದೂ ಇಲ್ಲ. ನಾವು ಆರೋಗ್ಯವಾಗಿರಬೇಕೆಂದರೆ ಪ್ರತಿದಿವಸ ಬೆಳಿಗ್ಗೆ ಕನಿಷ್ಟ ಮೂರು ಲೀಟರ್ ನೀರು ಕುಡಿಯಬೇಕು, ಬೀಯರ್ ಅಲ್ಲ. ರಾತ್ರಿ ಹೊತ್ತು ಬೀಯರ್ ಕುಡಿಯಬೇಕು, ಬೆಳಿಗ್ಗೆ ನೀರು ಕುಡಿಯಬೇಕು.

ಶ್ರೀ ಎಂ. ಸಿ. ನಾಣಯ್ಯ : ಮಾನ್ಯ ಉಪಾಧ್ಯಕ್ಷರೆ, ಬೀಯರ್ ಆದರೂ ಕುಡಿಯಲಿ, ನೀರಾದರೂ ಕುಡಿಯಲಿ, ಬೆಳಿಗ್ಗೆ ವಾಯು ಸೇವನೆಗೆ ಹೋಗುವಂತಹ ಸಂದರ್ಭದಲ್ಲಿ ಒಂದು-ಒಂದೂವರೆ ಗಂಟೆಗಳ ಕಾಲ ಅವರು ಪಾರ್ಕ್‌ನಲ್ಲಿ ತಿರುಗಾಡುತ್ತಾರೆ. ಆ ಅವಧಿಯಲ್ಲಿ ದೈಹಿಕವಾಗಿರುವಂತಹ ಈ ವಿಚಾರವನ್ನು ನಿಯಂತ್ರಣ ಮಾಡಿಕೊಳ್ಳುವುದ್ಕಕಾಗದೇ ಇರುವವರು ಪಾರ್ಕಿಗೆ ಹೋಗುವಾಗ ಒಂದೊಂದು ಪಾಲಿಥಿನ್ ಬ್ಯಾಗ್‌ಗಳನ್ನು ಕೈಯಲ್ಲಿ ತೆಗೆದುಕೊಂಡು ಹೋಗಲಿ.

ಶ್ರೀ ವಾಟಾಳ್ ನಾಗರಾಜ್ : ನೀವು ಅದನ್ನಾದರೂ ಒದಗಿಸುತೀರೋ?

## ಗುಳ್ಳೇದಗುಡ್ಡ ಬಸ್ ನಿಲ್ದಾಣದಲ್ಲಿ ಡಾಂಬರೀಕರಣ

180 - ಶ್ರೀ ರಾಜಶೇಖರ ವಿ. ಶೀಲವಂತ (ಗುಳ್ಳೇದಗುಡ್ಡ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) 1997-98ನೇ ಸಾಲಿನಲ್ಲಿ ಬಿಜಾಪುರ ಜಿಲ್ಲೆಯಲ್ಲಿನ ಯಾವ ಯಾವ ಬಸ್ ನಿಲ್ದಾಣದ ಆವರಣವನ್ನು ಡಾಂಬರೀಕರಣಗೊಳಿಸಲಾಗಿದೆ?*

*ಆ) ಗುಳೇದಗುಡ್ಡ ಬಸ್ ನಿಲ್ದಾಣದ ಆವರಣವನ್ನು ಡಾಂಬರೀಕರಣಗೊಳಿಸಬೇಕೆಂದು ಸಾರ್ವಜನಿಕರ ಒತ್ತಾಯ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

*ಇ) ಬಂದಿದ್ದಲ್ಲಿ ಡಾಂಬರೀಕರಣವನ್ನು ಯಾವಾಗ ಮಾಡಲಾಗುವುದು?*